



ಆರೋಗ್ಯದ ಮೇಲೆ ಮತ್ತು ಮಾನಸಿಕ ಒತ್ತಡದ ಬಗ್ಗೆ ಕೂಡ ಯೋಚಿಸಬೇಕಾಗುತ್ತದೆ.

ಅಂಡಾಣುಗಳನ್ನು ಕಾನೂನುಬಾಹಿರವಾಗಿ ವಿದೇಶಕ್ಕೆ ಸಾಗಣೆ ಮಾಡುತ್ತಿರುವವರನ್ನು ಭಾರತದ ವಿಮಾನ ನಿಲ್ದಾಣಗಳಲ್ಲಿ ಬಂಧಿಸಿದ್ದು, ಮುಂಬೈನಲ್ಲಿ ಇಂತಹ ಸಾಕಷ್ಟು ಪ್ರಕರಣಗಳು ದಾಖಲಾಗಿವೆ. ಜೀವನಕ್ರಮ, ಆಹಾರ ಪದ್ಧತಿ ಮತ್ತು ಹವಾಮಾನ ಮಹಿಳೆಯರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿರುವುದರಿಂದ ಪುರುಷ ಮತ್ತು ಸ್ತ್ರೀಯರಲ್ಲಿ ಬಂಜೆತನ ಹೆಚ್ಚಿದೆ. ಬೇಡಿಕೆಗೆ ತಕ್ಕಂತೆ ಫಲವಂತಿಕೆ ಸಂಬಂಧಿತ ವೈದ್ಯಕೀಯ ಚಿಕಿತ್ಸೆ ನೀಡುವಲ್ಲಿ ಭಾರತ ಕೂಡ ದೊಡ್ಡ ಮಾರುಕಟ್ಟೆಯಂತಾಗಿದೆ. ಮಗು ಪಡೆಯುವುದನ್ನು ತೀರಾ ಭಾವನಾತ್ಮಕವಾಗಿ ವಿಷಯವಾಗಿ ನೋಡುವುದರಿಂದ ಇಲ್ಲಿ ಫಲವಂತಿಕೆ ಆಸ್ಪತ್ರೆಗಳು ಹೆಚ್ಚುತ್ತಿವೆ. ಇದು ಆರ್ಥಿಕ ಶೋಷಣೆಗೆ ಮತ್ತು ಮಾನಸಿಕ ಕಾಯಿಲೆಗೆ ಕೂಡ ಕಾರಣವಾಗಿದೆ.

## ಭಾರತದಲ್ಲಿ ಕಾನೂನು

ಭಾರತದಲ್ಲಿ ಬಾಡಿಗೆ ತಾಯಿ, ಐವಿಎಫ್, ಐಸಿಎಸ್ಐ, ಪಿಎಡಿ ಇವೆಲ್ಲವಕ್ಕೂ ಒಳಗೊಂಡಂತೆ 2020ರಲ್ಲಿ 'ಅಸಿಸ್ಟೆಡ್ ರೆಪ್ರೊಡಕ್ಟಿವ್ ಟೆಕ್ನೊಲಜಿ ರೆಗ್ಯುಲೇಷನ್ ಬಿಲ್' ಸದನದಲ್ಲಿ ಒಪ್ಪಿಗೆ ಪಡೆದು ಕಾನೂನಾಗಿದೆ.

ಕಾನೂನಿನ ಒಪ್ಪಿಗೆಗಳೇನೇ ಇದ್ದರೂ, ಭಾರತದ ಸಮಾಜ ಈ ತಂತ್ರಜ್ಞಾನವನ್ನು ತುಂಬ ಮುಕ್ತವಾಗಿ ತೆಗೆದುಕೊಂಡಿಲ್ಲ ಎಂಬುದಂತೂ ನಿಜ. ಈ ತಂತ್ರಜ್ಞಾನ ಒಂದು ಆಯಾಮದಿಂದ ಹೆಣ್ಣಿಗೆ ದೊರಕುತ್ತಿರುವ ಬಿಡುಗಡೆಯ ಊರುಗೋಲಾಗಿ ಕಂಡರೂ, ಅವಳಿಗೆ ಪಾಶವಾಗುವ ಇನ್ನೊಂದು ಅಪಾಯವೂ ಇದಕ್ಕಿದೆ ಎಂಬುದನ್ನು ಮರೆಯುವಂತಿಲ್ಲ. ಇಂದಿನ ಬಹುರಾಷ್ಟ್ರೀಯ ಕಂಪನಿಗಳು ಈ ತಂತ್ರಜ್ಞಾನವನ್ನು ತಮ್ಮ ಕಂಪನಿಯ ಮಹಿಳಾ ಸಹೋದ್ಯೋಗಿಗಳ ನಡುವೆ ಜನಪ್ರಿಯಗೊಳಿಸುತ್ತಿರುವ ಪ್ರಕ್ರಿಯೆಗೆ ಸ್ತ್ರೀ ಸ್ವಾತಂತ್ರ್ಯ, ಅವಳ ಸಬಲೀಕರಣ ಇತ್ಯಾದಿ ಆಯಾಮಗಳಿದ್ದರೂ ಒಳಮುಖ ಬೇರೆಯೇ ಇರುವ ಸಾಧ್ಯತೆ ಇದೆ. ಹಲವು ಕಂಪನಿಗಳಲ್ಲಿ ಈಗಲೂ ಗರ್ಭಿಣಿ ಮಹಿಳೆಯರನ್ನು ಯಾವ್ಯಾವುದೋ ಕಾರಣ ಹುಡುಕಿ ಕೆಲಸದಿಂದ ತೆಗೆಯುವ ಪರಿಪಾಠ ಇರುವುದು ಗೊತ್ತೇ ಇದೆ. ಅದಕ್ಕೆ ಕಾರಣ, ಅವರಿಗೆ ಸಂಬಳರಹಿತವಾಗಿ ವರ್ಷಗಟ್ಟಲೆ ರಜೆ ಕೊಡಬೇಕಾಗುತ್ತದೆ ಎಂಬುದು. ಆದರೆ ಈ ತಂತ್ರಜ್ಞಾನದಿಂದ ಮಹಿಳಾ ಉದ್ಯೋಗಿಗಳು ಗರ್ಭಿಣಿ ರಜೆ ತೆಗೆದುಕೊಳ್ಳುವುದು ಮುಂದಕ್ಕೆ ಹೋಗುತ್ತದೆ. ಹಾಗಾಗಿ ಪರೋಕ್ಷವಾಗಿ ಇದೇ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಒತ್ತಡ ಹೇರುವ ಅಪಾಯವೂ ಇಲ್ಲದಿಲ್ಲ. ಹಾಗಾದಲ್ಲಿ, ಸ್ವಾತಂತ್ರ್ಯ ಹೆಸರಿನ ಶೋಷಣೆಗೆ ಈ ತಂತ್ರಜ್ಞಾನ ಸಾಧನವಾಗುತ್ತದಷ್ಟೆ.

ಮಗುವನ್ನು ಹೆರುವುದಷ್ಟೇ ಅಲ್ಲ, ಅದನ್ನು ಲಾಲಿಸುವುದೂ ಅಷ್ಟೇ ಮುಖ್ಯ. ನವಜಾತ ಶಿಶುವನ್ನು ಲಾಲಿಸಲು ತಾಯಿಗೂ ಸಾಕಷ್ಟು ತ್ರಾಣ ಬೇಕು. ಒಂದು ವಯಸ್ಸು ಮೀರಿದ ನಂತರ ಮಗುವನ್ನು ಪಡೆದುಕೊಂಡರೆ ಅದನ್ನು ಲಾಲಿಸುವ ತ್ರಾಣವೂ ಇರದೆ ಇನ್ನಷ್ಟು ಕಷ್ಟಕ್ಕೆ ಗುರಿಯಾಗಬೇಕಾಗುತ್ತದೆ ಎಂಬ ಅಭಿಪ್ರಾಯವೂ ಇದೆ. ಇದೇ ಒಂದು ದಂಧೆಯಾಗಿ, ಮಹಿಳಾ ಶೋಷಣೆಯ ಇನ್ನೊಂದು ಕ್ರೂರ ವ್ಯವಸ್ಥೆ ಹುಟ್ಟಿಕೊಳ್ಳುವ ಸೂಚನೆಗಳೂ ಈಗಾಗಲೇ ಕಾಣಲಾರಂಭಿಸಿವೆ ಎನ್ನುವುದನ್ನು ಮರೆಯಬಾರದು.

'ಎಗ್ ಫ್ರೀಜಿಂಗ್' ಎನ್ನುವುದು, ವೈದ್ಯಕೀಯ ಅನಿವಾರ್ಯವಾಗಿದ್ದರೆ ತೊಂದರೆಯಿಲ್ಲ. ಅದು ಜೀವನಶೈಲಿ ಭಾಗವಾಗಿಬಿಟ್ಟರೆ ನಿಸರ್ಗಸಹಜವಾಗಿ ಹುಟ್ಟಿಗೆ ಇರುವ ಘನತೆಯ ಮೂಲವೇ ಅಲ್ಲಾಡುತ್ತದೆ. ಇದರ ಗೋಚರ ಅಗೋಚರ ಪರಿಣಾಮಗಳು ಇಡೀ ಸಮಾಜದ ಮೇಲೆ ಆಗುತ್ತದೆ. ಕೆಲವು ಪರಿಣಾಮಗಳು ತಕ್ಷಣವೇ ಕಾಣಿಸಿಕೊಳ್ಳಬಹುದು. ಇನ್ನು ಕೆಲವು ದೂರಗಾಮಿ ಪರಿಣಾಮಗಳೂ ಇರುತ್ತವೆ ಎನ್ನುವ ಕೆಲವು ಸಮಾಜಶಾಸ್ತ್ರಜ್ಞರು, ಈ ತಂತ್ರಜ್ಞಾನದ ಕುರಿತು ಆತಂಕ ವ್ಯಕ್ತಪಡಿಸುವವರೂ ಇದ್ದಾರೆ.

ಅವಕಾಶ, ಅಪಾಯಗಳ ಸಾಧ್ಯತೆಗಳೇನೇ ಇರಲಿ, 'ಎಗ್ ಫ್ರೀಜಿಂಗ್' ತಂತ್ರಜ್ಞಾನ ಜನಪ್ರಿಯಗೊಳ್ಳುತ್ತಿರುವುದಂತೂ ಸತ್ಯ. ಕೆಲವು ತಲೆಮಾರುಗಳ ನಂತರ 'ಕೋಳಿ ಮೊದಲಾ ಮೊಟ್ಟೆ ಮೊದಲಾ' ಎಂಬ ಗಾದೆ 'ಮೊಟ್ಟೆ ಮೊದಲಾ ಮಗು ಮೊದಲಾ' ಎಂದು ಬದಲಾದರೆ ಅಚ್ಚರಿಯಿಲ್ಲ.

ಪ್ರತಿಕ್ರಿಯಿಸಿ: feedback@sudha.co.in